ಒಂದು ದಿನ ನಣ್ಣರ ಅಂಗಡಿಯಲ್ಲಿ ನಿಂತು ಸಿಗರೇಟು ಸೇದಿಕೊಂಡಿದ್ದೆ. ಎದುರಿನ ಅಂಗಡಿಯ ಎದುರಿಗೆ ಒಂದು ಸಾಮಾನಿನ ಲಾರಿ ನಿಂತಿತ್ತು. ಆ ಅಂಗಡಿಗೆ ಹಲವಾರು ಮೂಟೆ ದವಸಧಾನ್ಯಗಳನ್ನು ಇಳಿಸುವುದನ್ನು ನಾವೆಲ್ಲರೂ ಕುತೂಹಲವೇನೂ ಇಲ್ಲದೆ ನೋಡಿಕೊಂಡಿದ್ದೆವು. ದವಸ ಧಾನ್ಯಗಳನ್ನು ಇಳಿಸಿದ ನಂತರ ಡ್ರೈವರನು ತನ್ನ ಸೀಟಿಗೆ ಹತ್ತಿ ಕುಳಿತುಕೊಂಡ. ಅದುವರೆಗೆ ನಮ್ಮ ಜತೆಗೆ ಸೇರಿ ಮೂಟೆಗಳನ್ನು ಸಾಗಿಸುವ ದೃಶ್ಯವನ್ನು ನೋಡುತ್ತಿದ್ದ ನಣ್ಣರು ಅಲ್ಲಿದ್ದ ಹಳ್ಳಿಗ ಗಿರಾಕಿಯೊಬ್ಬನನ್ನು ಕುರಿತು, “ಓಡು ಓಡು, ಡ್ರೈವರ್ ನನಗೆ ಮುನ್ನೂರು ರೂಪಾಯಿ ಕೊಡಬೇಕು, ಕೇಳಿಕೊಂಡು ಬಾ! ನಿಲ್ಲಿಸು ಅವನನ್ನು!” ಎಂದು ಅರಚಿದರು. ಹಳ್ಳಿಗ ಓಡಿ ಹೋಗಿ, ಲಾರಿ ಸ್ಟಾರ್ಟ್ ಮಾಡಿದ್ದ ಡ್ರೈವರನನ್ನು ತಡೆದು ಏನನ್ನೋ ಹೇಳಿದ. ಡ್ರೈವರ್, ‘ಇಲ್ಲ, ಇಲ್ಲ’ ಎಂಬಂತೆ ಕೈತಿರುವಿ ಲಾರಿಬಿಟ್ಟುಕೊಂಡು ಹೊರಟುಹೋದ.

ಹಳ್ಳಿಗ: ಡ್ರೈವರ್ ಹೇಳಿದ, ಅವನು ನಿಮಗೆ ಯಾವ ಹಣವನ್ನೂ ಕೊಡಲಿಕ್ಕೆ ಇಲ್ಲವಂತೆ.

ನಣ್ಣರು: ಹೌದೆ? ಹಾಗೆಂದನೆ? ಹಾಗಾದರೆ ಅಂಗಡಿಯವನು ಕೊಡಬೇಕು. ದೊಡ್ಡ ಕಳ್ಳ ಅವನು, ಅವನು ಕೊಡಲಿಕ್ಕಿಲ್ಲ!

ಇಂತಹ ಘಟನೆಗಳಿಂದ ನಣ್ಣರ ಬಗ್ಗೆ ನನ್ನ ಅರಿವು ಹೆಚ್ಚಾಗುವ ಬದಲು ಅವರು ಸಮಸ್ಯೆಯಾಗುತ್ತಲೇ ಹೋದರು. ಸಮಸ್ಯೆ ಬಿಡಿಸಲು ಹೋದರೆ ಅದು ಇನ್ನಷ್ಟು ಜಟಿಲವಾಗುತ್ತಿತ್ತು.

ಬಟಾಟೆಯ ವಿಷಯವನ್ನೇ ಎತ್ತಿಕೊಂಡು ಕೇಳಿದ್ದೆ, ಯಾಕೆ ನಿಮಗೆ ನಷ್ಟ ಮಾಡಿಕೊಂಡು ಸಾಮಾನು ಮಾರುತ್ತೀರಿ ಎಂದು.

ನಣ್ಣರು: ಒಂದು ಕಿಲೋ ಬಟಾಟೆಗೆ ಎಷ್ಟು ಹೇಳಿ?

ನಾನು: ಇಪ್ಪತ್ತು ರೂಪಾಯಿ.

ನಣ್ಣರು: ನನಗೆ ಅದು ಎಷ್ಟಕ್ಕೆ ಸಿಗುತ್ತದೆ ಗೊತ್ತುಂಟಾ?

ನಾನು: ಐದು ರೂಪಾಯಿಗೆ ಇರಬಹುದೆ? (ಅವರು ಮೂರು ರೂಪಾಯಿಗೆ ಅರ್ಧ ಕಿಲೋ ಮಾರಿದ ಅಂದಾಜಿನ ಮೇಲೆ ನಾನು ಈ ಬೆಲೆ ಕಟ್ಟಿದ್ದೆ).

ನಣ್ಣರು: ಹಾಹಾ! ನೀವು ಸೋತಿರಿ. ನನಗೆ ಹದಿನಾಲ್ಕು ರೂಪಾಯಿಗೆ ಸಿಗುತ್ತದೆ. ಯಾರಾದರೂ ಹದಿನಾಲ್ಕು ರೂಪಾಯಿಗೆ ತೆಗೆದುಕೊಂಡು ಆರು ರೂಪಾಯಿಗೆ ಮಾರುವುದನ್ನು ನೋಡಿದ್ದೀರ?

ನಾನು: ಇಲ್ಲ.

ನಣ್ಣರು: ನಾನೇ ಇದ್ದೇನಲ್ಲ. ಆ ಕಳ್ಳರೆಲ್ಲ ಹದಿನಾಲ್ಕು ರೂಪಾಯಿಗೆ ತೆಗೆದುಕೊಂಡು ಇಪ್ಪತ್ತು ರೂಪಾಯಿಗೆ ಮಾರುತ್ತಾರೆ. ನಾನು ನೋಡಿ, ಆರು ರೂಪಾಯಿಗೆ ಮಾರುತ್ತೇನೆ. ಅದಕ್ಕೆ ಆ ಅಂಗಡಿಯವನು ನೋಡಿ ದುಡ್ಡು ಮಾಡಿ ಬಂಗ್ಲೆ ಕಟ್ಟಿದ್ದಾನೆ. ನನಗೆ ದೇವರು ಏನೂ ಕಮ್ಮಿ ಮಾಡಲಿಲ್ಲ. ನನ್ನ ಮಗಳು ಗೊತ್ತುಂಟ ನಿಮಗೆ?

ನಾನು ಇಲ್ಲವೆಂದೆ.

ನಣ್ಣರು: ಅವಳು ತುಂಬಾ ಚೆಂದದ ಹುಡುಗಿ. ನಮಗೆ ಒಬ್ಬಳೇ ಮಗಳು. ಯುನಿವರ್ಸಿಟಿಗೆ ಅವಳು ರ‍್ಯಾಂಕ್ ಗೊತ್ತುಂಟ? ಅವಳು ಕೇಳಿದಳು, ಅಪ್ಪ ನೀನು ನನಗೆ ಎಂಥ ಕೊಡುತ್ತಿ? ನಾನು ಎಂಥದು ಕೊಡುವುದು ಮಾರಾಯರೆ ಅವಳಿಗೆ, ಬಡವ ನಾನು!

ನಣ್ಣರು ನಗಾಡಲಾರಂಭಿಸಿ ನಕ್ಕು ನಕ್ಕು ಸುಸ್ತಾದರು. ಆ ನಗು ಒಂದು ಅವ್ಯಕ್ತ